KAVP500018972024

NAGESH KORGA MOGER

judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.07.06 17:18:15 +0530

Presented on : 27-06-2024
Registered on : 27-06-2024
Decided on : 04-07-2026
Duration : 2 years, 0 months, 7 days

ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರ ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ , ಸಿಂದಗಿ

ಉಪಸ್ಥಿರು: ಶ್ರೀ ನಾಗೇಶ ಕೆ. ಮೊಗೇರ.,
ಬಿ.ಕಾಂ, ಎಲ್.ಎಲ್.ಎಮ್
ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ

ಕ್ರಿಮಿನಲ್ ಪ್ರಕರಣ ಸಂಖ್ಯೆ **1444/2024.**

ದಿನಾಂಕ **4** ನೇ ಜುಲೈ **2026**

ಫಿರ್ಯಾದುದಾರರು:

ಸರ್ಕಾರದ ಪರವಾಗಿ ಸಿಂದಗಿ ಪಿ.ಎಸ್

( A.P.P)

ವಿರುದ್ಧ

ಆರೋಪಿತರು

ಮಲ್ಲಿಗನಾಥ @ ಮಲ್ಲಿನಾಥ ತಂ. ರಾವುತಪ್ಪ ಭಂಟನೂರ
ವಯಾ: 38 ವರ್ಷ, ಉ: ಚಾಲಕ
ಸಾ: ಖೈನೂರ ತಾ: ಸಿಂದಗಿ, ಜಿ: ವಿಜಯಪುರ.

( Sri.N.S.B Adv.)

<u>ತೀರ್ಪು</u>

ಆರಕ್ಷಕ ವೃತ್ತ ನಿರೀಕ್ಷಕರು, ಸಿಂದಗಿ ಇವರು ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279,337,304 ಎ ಮತ್ತು ಮೋಟಾರು ವಾಹನ ಕಾಯ್ದೆ ಕಲಂ 3 ಸ.ಕ. 181, 146 ಸ.ಕ. 196 ರನ್ವಯ ಶಿಕ್ಷಾರ್ಹವಾದ ಅಪರಾಧಗಳಿಗೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** <u>ಅಭಿಯೋಜನೆಯ ಪ್ರಕರಣದ ಸಂಕಿಪ್ತ ಸಾರಾಂಶ ಎನೆಂದರೆ</u>

ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ಸಿಂದಗಿ -ಯಂಕಂಚಿ ಸಾರ್ವಜನಿಕ ರಸ್ತೆಯಲ್ಲಿ, ಶಂಕರಗೌಡ ಪಾಟೀಲ ಇವರ ಜಮೀನಿನ ಹತ್ತಿರ ದಿನಾಂಕ 13.12.2023 ರಂದು 15.00 ಗಂಟೆಯ ಸುಮಾರಿಗೆ, ಆರೋಪಿಯು ಚಾಲನಾ ಪರವಾನಿಗೆ ಪತ್ರ ಹೊಂದದೆ , ವಿಮಾ ಪಾಲಿಸಿ ಮಾಡಿಸದೇ ಇರುವ ಟಂಟಂ ವಾಹನ ನಂ. ಕೆ.ಎ-28/ಡಿ-7521 ನೇದ್ದರಲ್ಲಿ ವಿಠ್ಠಲ, ಚಾ.ಸಾ.12 ಮತ್ತು 13 ರವರನ್ನು ಕೂಡಿಸಿಕೊಂಡು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದು, ಚಾಲನಾ ನಿಯಂತ್ರಣ ತಪ್ಪಿ ಟಂಟಂ ವಾಹನ ರಸ್ತೆಯ ಬದಿಯಲ್ಲಿ ಪಲ್ಟಿ ಹೊಡೆಸಿದ್ದರಿಂದ ಸದರಿ ಟಂಟಂ ವಾಹನದಲ್ಲಿ ಕುಳಿತಿದ್ದ ಚಾ.ಸಾ.12 ರವರ ಸೊಂಟಕ್ಕೆ, ಬೆನ್ನಿಗೆ, ತಲೆಗೆ ಸಾದಾ ಒಳಪೆಟ್ಟಾಗಿದ್ದು, ಚಾ.ಸಾ.13 ರವರ ಮೈ ಕೈಗೆ ಒಳಪೆಟ್ಟಾಗಿದ್ದು, ವಿಠ್ಠಲರವರ ತಲೆಗೆ ಭಾರಿ ಗಾಯಗಳಾಗಿ ಮರಣ

ಹೊಂದಿದ್ದು, ಸಾಕ್ಷೀದಾರರ ಹೇಳಿಕೆಯಿಂದ ಮತ್ತು ತನಿಖೆಯಿಂದ ದೃಢಪಟ್ಟಿದ್ದರಿಂದ ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279,337,304 ಎ ಮತ್ತು ಮೋಟಾರು ವಾಹನ ಕಾಯ್ದೆ ಕಲಂ 3 ಸ.ಕ. 181, 146 ಸ.ಕ. 196 ರನ್ವಯ ದೋಷಾರೋಪಣ ಪಟ್ಟಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಕರಣವನ್ನು ದಾಖಲಿಸಿದ ನಂತರ ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ಅಪರಾಧದ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸನ್ನು ನೀಡಲಾಯಿತು. ಆರೋಪಿಯು ಹಾಜರಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪಟ್ಟಿಯ ನಕಲು ಪ್ರತಿಯನ್ನು ಆರೋಪಿಗೆ ನೀಡಲಾಯಿತು. ಆರೋಪಿಯ ವಿರುದ್ದ ಆಪದಾದನೆಯನ್ನು ರಚಿಸಿ ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಲಾಗಿ, ಸದರಿ ಆಪಾದನೆಯನ್ನು ಆರೋಪಿಯು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

4. ಅಭಿಯೋಜನಾ ಪಕ್ಷದವರು ಆರೋಪಿಯ ಮೇಲಿನ ಪ್ರಕರಣವನ್ನು ರುಜುವಾತುಪಡಿಸಲು ಈ ಪ್ರಕರಣದಲ್ಲಿ ಅ.ಸಾ: 1 ರಿಂದ 12 ರವರನ್ನು ವಿಚಾರಣೆಗೊಳಪಡಿಸಿ, ನಿ.ಪಿ. 1 ರಿಂದ 20 ನ್ನು ಗುರುತಿಸಿಕೊಳ್ಳಲಾಯಿತು.

ಆರೋಪಿಯ ವಿರುದ್ದ ಕಂಡು ಬಂದ ಸಾಕ್ಷಿದಾರರ ಹೇಳಿಕೆಗಳನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಪಡೆದುಕೊಳ್ಳಲಾಯಿತು. ಆರೋಪಿಯು ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿಸಿರುವುದಿಲ್ಲ.

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಿ, ಮೌಖಿಕ ಸಾಕ್ಷ್ಯ ಮತ್ತು ದಾಖಲೆಗಳನ್ನು ಪರಿಶೀಲಿಸಿ ತೀರ್ಪಿಗಾಗಿ ಕಾಯ್ದಿರಿಸಲಾಯಿತು.

6. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1. ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ಸಿಂದಗಿ - ಯಂಕಂಚಿ ಸಾರ್ವಜನಿಕ ರಸ್ತೆಯಲ್ಲಿ, ಶಂಕರಗೌಡ ಪಾಟೀಲ ಇವರ ಜಮೀನಿನ ಹತ್ತಿರ ದಿನಾಂಕ 13.12.2023 ರಂದು 15.00 ಗಂಟೆಯ ಸುಮಾರಿಗೆ, ಆರೋಪಿಯು ಟಂಟಂ ವಾಹನ ನಂ. ಕೆ.ಎ-28/ಡಿ-7521 ನೇದ್ದರಲ್ಲಿ ವಿಠ್ಠಲ, ಚಾ.ಸಾ.12 ಮತ್ತು 13 ರವರನ್ನು ಕೂಡಿಸಿಕೊಂಡು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದು, ಚಾಲನಾ ನಿಯಂತ್ರಣ ತಪ್ಪಿ ಟಂಟಂ ವಾಹನ ರಸ್ತೆಯ ಬದಿಯಲ್ಲಿ ಪಲ್ಟಿಯಾಗಿದ್ದು ಈ ಮೂಲಕ ಭಾ.ದ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ?

2. ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ವಾಹನವನ್ನು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದರಿಂದ ಚಾಲನಾ ನಿಯಂತ್ರಣ ತಪ್ಪಿ ಟಂಟಂ ವಾಹನ ರಸ್ತೆಯ ಬದಿಯಲ್ಲಿ

ಪಲ್ಟಿಯಾಗಿದ್ದು ಸದರಿ ಟಂಟಂ ವಾಹನದಲ್ಲಿ ಕುಳಿತಿದ್ದ ಚಾ.ಸಾ.12 ರವರ ಸೊಂಟಕ್ಕೆ, ಬೆನ್ನಿಗೆ, ತಲೆಗೆ ಸಾದಾ ಒಳಪೆಟ್ಟಾಗಿದ್ದು, ಚಾ.ಸಾ.13 ರವರ ಮೈ ಕೈಗೆ ಮತ್ತು ಆರೋಪಿಯಾದ ನಿಮ್ಮ ತೆಲೆಗೆ, ಸೊಂಟಕ್ಕೆ ಸಾದಾ ಒಳಪೆಟ್ಟಾಗಿದ್ದು ಈ ಮೂಲಕ ಭಾ.ದ.ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ ?

3. ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ವಾಹನವನ್ನು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದರಿಂದ ಚಾಲನಾ ನಿಯಂತ್ರಣ ತಪ್ಪಿ ಟಂಟಂ ವಾಹನ ರಸ್ತೆಯ ಬದಿಯಲ್ಲಿ ಪಲ್ಟಿಯಾಗಿದ್ದು ಸದರಿ ಟಂಟಂ ವಾಹನದಲ್ಲಿ ಕುಳಿತಿದ್ದ ವಿಠ್ಠಲರವರ ತಲೆಗೆ ಭಾರಿ ಗಾಯಗಳಾಗಿ ಮರಣ ಹೊಂದಿದ್ದು ಈ ಮೂಲಕ ಭಾ.ದ.ಕಲಂ 304 ಎ ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ ?

4. ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಲನಾ ಪರವಾನಿಗೆ ಪತ್ರ ಹೊಂದದೆ ಈ ಮೇಲೆ ಹೇಳಿದ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿದ್ದು , ಈ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 3 ಸ.ಕ.181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ ?

5. ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ವಿಮಾ ಪಾಲಿಸಿ ಮಾಡಿಸದೇ ಇರುವ ಈ ಮೇಲೆ ಹೇಳಿದ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿದ್ದು , ಈ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 146 ಸ.ಕ.196 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶವಾಗಿ ರುಜುವಾತು ಪಡಿಸುತ್ತಾರೆಯೇ ?

6. ಯಾವ ಆದೇಶ ?

7. ಈ ಮೇಲಿನ ಅಂಶಗಳಿಗೆ ನಾನು ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 5 : ನಕಾರಾತ್ಮಕವಾಗಿ.

ಅಂಶ ನಂ.6 : ಅಂತಿಮ ಆದೇಶದಂತೆ, ಈ ಕೆಳಗಿನ ಕಾರಣಗಳಿಗಾಗಿ........

ಕಾರಣಗಳು

**8.** ಅಂಶ 1 ರಿಂದ 3 ಈ 3 ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿದ್ದು, ಒಂದೇ ರೀತಿಯ ಸಾಕ್ಷ್ಯವನ್ನು ಆಧರಿಸಿ ಚರ್ಚಿಸಿ ನಿರ್ಧರಿಸಬೇಕಾಗಿರುವುದರಿಂದ ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು ಒಂದೇ ಸಮಾನ ಚರ್ಚೆಯಲ್ಲಿ ನಿರ್ಧರಿಸಲು ತೀರ್ಮಾನಿಸಿರುತ್ತೇನೆ.

ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ 279,337,304 ಎ ಮತ್ತು ಮೋಟಾರು ವಾಹನ ಕಾಯ್ದೆ ಕಲಂ 3 ಸ.ಕ. 181, 146 ಸ.ಕ. 196 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾರೆಂದು ಆಪಾದಿಸಲಾಗಿದೆ. ತನಿಖಾಧಿಕಾರಿಗಳು ತನಿಖೆಯನ್ನು ನಡೆಸಿ, ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಭಿಯೋಗದವರು ಆರೋಪಿಯ ಮೇಲಿನ ಆಪಾದನೆಯನ್ನು ರುಜುವಾತು ಪಡಿಸಲು ನ್ಯಾಯಾಲಯದ ಮುಂದೆ ಅ.ಸಾ. 1 ರಿಂದ 12 ರವರನ್ನು ವಿಚಾರಣೆಗೆ ಒಳಪಡಿಸಿ ನಿ.ಪಿ. 1 ರಿಂದ 20 ನ್ನು ಗುರುತಿಸಿಕೊಂಡಿರುತ್ತಾರೆ.

9. ಅ.ಸಾ.1 ರವರು ಫಿರ್ಯಾದುದಾರರಾಗಿರುತ್ತಾರೆ. ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಚಾ.ಸಾ. 5 ತನ್ನ ಅಣ್ಣ. ಚಾಸಾ 6 ತನ್ನ ತಾಯಿ. ಚಾ.ಸಾ. 7 ರಿಂದ 13 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ವಿಠ್ಠಲ ತನ್ನ ತಂದೆ. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಅಪಘಾತವು ಸುಮಾರು 02 ವರ್ಷಗಳ ಹಿಂದೆ ಸಂಭವಿಸಿದೆ. ಎಲ್ಲಿ ಸಂಭವಿಸಿದೆ ಎಂದು ತನಗೆ ಗೊತ್ತಿಲ್ಲ. ತನ್ನ ತಂದೆಯವರನ್ನು ಸಿಂದಗಿಯ ಜಾಲಗೇರಿಯ ಆಸ್ಪತ್ರೆಯಲ್ಲಿ ಬಂದು ನೋಡಿರುತ್ತೇನೆ. ಅವರಿಗೆ ಆಗಿರುವ ಗಾಯಗಳನ್ನು ತಾನು ನೋಡಿಲ್ಲ. ತಮ್ಮ ಸಂಬಂಧಿಕರು ತನ್ನ ತಂದೆಯವನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರಕ್ಕೆ ಕರೆದುಕೊಂಡು ಹೋಗಿದ್ದರು. ತಾನು ಮನೆಗೆ ಮರಳಿ ಬಂದಿರುತ್ತೇನೆ. ವಿಜಯಪುರ ಆಸ್ಪತ್ರೆಗೆ ಹೋಗುವಷ್ಟರಲ್ಲಿ ತನ್ನ ತಂದೆ ಮರಣ ಹೊಂದಿದ್ದರು. ಅಪಘಾತವು ಯಾರ ತಪ್ಪಿನಿಂದ ಸಂಭವಿಸಿದೆ ಎಂದು ತಾನು ಕೇಳಿಲ್ಲ. ತಮ್ಮ ಊರಿನವರ ಮಾತು ಕೇಳಿ ದೂರನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಗಿರುತ್ತದೆ. ಸದರಿ ದೂರಿನಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ತನಗೆ ಗೊತ್ತಿಲ್ಲ. ಆ ದಿನ ಯಾರು ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜನೆಯವರು ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ,

10. ಅ.ಸಾ.2 ರವರು ಶವ ಪಂಚನಾಮೆ , ಗುನ್ಹೆ ಪಂಚನಾಮೆ ಹಾಗೂ ವಾಹನ ತಡೆ ಪಂಚನಾಮೆಯ ಸಾಕ್ಷೀದಾರರಾಗಿದ್ದು ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಪಂಚನಾಮೆಗಳಿನ ತಮ್ಮ ಸಹಿಗಳನ್ನು ಗುರುತಿಸಿದ್ದು , ಅವುಗಳು ಅನುಕ್ರಮವಾಗಿ ನಿ.ಪಿ.2, ನಿ.ಪಿ.5 , ನಿ.ಪಿ.8 ಎಂದು ,ಸಾಕ್ಷೀಯ ಸಹಿಗಳು ನಿ.ಪಿ.2 ಎ, ನಿ.ಪಿ.5 ಎ , ನಿ.ಪಿ.8 ಎ ಎಂದು ಮತ್ತು ಪೋಟೊಗಳು ನಿ.ಪಿ.3,4,6,7,9 ಮತ್ತು 10 ಎಂದು ಗುರುತಿಸಲಾಗಿರುತ್ತದೆ. ಟಂ ಟಂ ಅಪಘಾತಕ್ಕೆ ಸಂಬಂಧಿಸಿ ತಾನು ಸುಮಾರು 2 ವರ್ಷಗಳ ಹಿಂದೆ ಸದರಿ ಸಹಿಗಳನ್ನು ಮಾಡಿರುತ್ತೇನೆ ಒಂದು ಸಹಿಯನ್ನು ಘಟನಾ ಸ್ಥಳದಲ್ಲಿ, ಇನ್ನೊಂದು ಸಹಿಯನ್ನು ಪೊಲೀಸ್ ಠಾಣೆಯಲ್ಲಿ, ಮತ್ತೊಂದು ಸಹಿಯನ್ನು ಶವ ಪಂಚನಾಮೆಯ ಕಾಲಕ್ಕೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

11. ಅಭಿಯೋಜನೆಯವರ ಪಾಟೀ ಸವಾಲಿನಲ್ಲಿ ಅಭಿಯೋಜನೆಯವರು ಸೂಚಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ.ಆರೋಪಿಯ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

> " ನಾನು ಸಹಿ ಮಾಡಿರುವ ಪಂಚನಾಮೆಯ ಗಳಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಸಂಭವಿಸಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪೊಲೀಸರು ನಿಲ್ಲುವಂತೆ ಹೇಳಿದ್ದರಿಂದ ನಾನು ನಿಂತಿದ್ದು, ಪೊಲೀಸರು ಫೊಟೊ ತೆಗೆದಿರುತ್ತಾರೆ ಎಂದರೆ ಸರಿ."

ಇವರ ಈ ಮೇಲಿನ ಸಾಕ್ಷ್ಯವನ್ನು ಪರಿಶೀಲಿಸಿದಾಗ ನಿ.ಪಿ.5 ಗುನ್ಹೆ ಪಂಚನಾಮೆಯನ್ನು ನಂಬಲು ಸಂಶಯವುಂಟಾಗುತ್ತದೆ.

12. ಅ.ಸಾ.3 ರವರು ಶವ ಪಂಚನಾಮೆ , ಗುನ್ಹೆ ಪಂಚನಾಮೆ ಹಾಗೂ ವಾಹನ ತಡೆ ಪಂಚನಾಮೆಯ ಸಾಕ್ಷೀದಾರರಾಗಿದ್ದು ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಪಂಚನಾಮೆಗಳಿನ ತಮ್ಮ ಸಹಿಗಳನ್ನು ಗುರುತಿಸಿದ್ದು, ಅವುಗಳು ನಿ.ಪಿ.2 ಬಿ, ನಿ.ಪಿ.5 ಬಿ , ನಿ.ಪಿ.8 ಬಿ ಎಂದು ಗುರುತಾಗಿರುತ್ತವೆ. ಸದರಿ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಫೋಟೊಗಳನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ಪೊಲೀಸರು ತನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿಲ್ಲ ಮತ್ತು ವಾಹನಗಳನ್ನು ಜಪ್ತಿಮಾಡಿಕೊಂಡಿಲ್ಲ. ನಿ.ಪಿ. 5 ಮತ್ತು 8 ರಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರು ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ.

13. ಅ.ಸಾ.4 ರವರು ಮೃತರ ಮಗನಾಗಿರುತ್ತಾರೆ. ಅ.ಸಾ.5 ರವರು ಮೃತರ ಹೆಂಡತಿಯಾಗಿರುತ್ತಾರೆ. ಇವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷೀದಾರರಾಗಿದ್ದು, ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ 2024 ರಲ್ಲಿ ವಿಠಲರವರು ಟಂಟಂ ನಲ್ಲಿ ಹೋಗುವಾಗ ಕುರಿ ಅಡ್ಡ ಬಂದು ಟಂಟಂ

ಪಲ್ಟಿಯಾಗಿದ್ದರಿಂದ ಅಪಘಾತವಾಗಿ ಅವರು ಮರಣ ಹೊಂದಿರುತ್ತಾರೆ. ಆಗ ತಾವು ಸಿಂದಗಿಯಲ್ಲಿ ಇದ್ದೇವು. ಅಪಘಾತವಾದ ದಿನ ಆರೋಪಿಯೇ ಸದರಿ ಟಂಟಂ ನ್ನು ಚಾಲನೆ ಮಾಡುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಪಘಾತದಲ್ಲಿ ಬೇರೆ ಯಾರಿಗೆ ಎನು ಆಗಿತ್ತು ಎಂದು ತಮಗೆ ಗೊತ್ತಿಲ್ಲ ಎಂದು ಸಾಕ್ಷೀ ನುಡಿದಿರುತ್ತಾರೆ. ಅಭಿಯೋಜನೆಯವರು ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ,

14. ಅ.ಸಾ.6 ಮತ್ತು 7 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಮೃತ ವಿಠ್ಠಲ ರವರ ಪರಿಚಯ ಇದೆ. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಆ ದಿನ ತಾವು ಮತ್ತು ಮೃತ ವಿಠ್ಠಲ ಮತ್ತು ಊರಿನವರು ಸೇರಿಕೊಂಡು ಖೈನೂರಗೆ ಟಂ ಟಂ ವಾಹನದಲ್ಲಿ ಹೊಗುತ್ತಿದ್ದಾಗ, ಕುರಿ ಅಡ್ಡ ಬಂದು ಯಂಕಂಚಿ ಹಳ್ಳದ ಸಮೀಪ್ ಟಂ ಟಂ ಪಲ್ಟಿಯಾಗಿರುತ್ತದೆ. ಸದರಿ ಅಪಘಾತದಲ್ಲಿ ತಮಗೆ ಸ್ವಲ್ಪ ಪೆಟ್ಟಾಗಿತ್ತು. ಚಾ.ಸಾ. 13 ರವರಿಗೆ ಮತ್ತು ವಿಠ್ಠಲ ರವರಿಗೆ ಗಾಯಗಳು ಆಗಿದ್ದವು. ನಂತರ ತಾವು ಸಿಂದಗಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ಆ ದಿನ ಟಂ ಟಂ ವಾಹನವನ್ನು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಚಾಲನೆ ಮಾಡುತ್ತಿದ್ದರು. ಕುರಿ ಅಡ್ಡ ಬಂದಿದ್ದರಿಂದ ಅಪಘಾತವಾಗಿರುತ್ತದೆ. ಈ ಬಗ್ಗೆ ತಾವು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ಅಭಿಯೋಜನೆಯವರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

" ದಿ.13-12-2023 ರಂದು ಮದ್ಯಾಹ್ನ 2-30 ರಿಂದ 3-00 ಗಂಟೆ ಸುಮಾರಿಗೆ ತಾವು ಜೀಪ್ ನಲ್ಲಿ ಹೊರಟಿದ್ದೇವು ಎಂದರೆ ಸರಿ. ಚಾಸಾ 10 ರವರು ಜೀಪ್ ನ್ನು ನಡೆಸುತ್ತಿದ್ದರು ಎಂದರೆ ಸರಿ. ಯಂಕಂಚಿ ಹಳ್ಳದ ಹತ್ತಿರ ಒಬ್ಬ ಟಂ ಟಂ ಚಾಲಕನು ತನ್ನ ಟಂ ಟಂ ವನ್ನು ಚಾಲನೆ ಮಾಡಿಕೊಂಡುಹ ಹೊಗುತ್ತಿದ್ದಾಗ, ಕುರಿ ಅಡ್ಡ ಬಂದಿದ್ದರಿಂದ, ಅದನ್ನು ತಪ್ಪಿಸಲು ಹೋಗಿ ರಸ್ತೆಯ ಬದಿಯಲ್ಲಿರುವ ತೆಗ್ಗಿನಲ್ಲಿ ಟಂ ಟಂ ವಾಹನವು ಪಲ್ಟಿಯಾಗಿತ್ತು ಎಂದರೆ ಸರಿ. ಆಗ ನಾನು ಜೀಪ್ ನಿಂದ ಇಳಿದು ನೋಡಲು ಹೊಗಿದ್ದೆ ಎಂದರೆ ಸರಿ."

ಆರೋಪಿಯ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

"ಅಪಘಾತವಾದಾಗ ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತವಾದ ನಂತರ ನಾನು ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿ. ಆದ್ದರಿಂದ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಹೇಳಲು ಸಾಧವಾಗುವುದಿಲ್ಲ ಎಂದರೆ ಸರಿ. " ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇವರ ಮುಖ್ಯ ವಿಚಾರಣೆ , ಆರೋಪಿತರ ಪರ ಪಾಟೀ ಸವಾಲು ಹಾಗೂ ಅಭಿ ಯೋಜನೆಯವರ ಪರ ಪಾಟೀ ಸವಾಲಿನಲ್ಲಿ ಮೂಡಿಬಂದಿರುವ ಸಾಕ್ಷ್ಯವನ್ನು ಪರಿಶೀಲಿಸಿದಾಗ ಇವರು ಅಪಘಾತದಲ್ಲಿ ಭಾಗಿಯಾದ ವಾಹನದಲ್ಲಿ ಪ್ರಯಾಣಿಸಿದವರೋ ಅಥವಾ ಬೇರೆ ವಾಹನದಲ್ಲಿ ಇದ್ದವರೋ ಎನ್ನುವ ಬಗ್ಗೆ ಸಂಶಯ ಮೂಡುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ಇವರು ಆರೋಪಿ ಪರ ಪಾಟೀ ಸವಾಲಿನಲ್ಲಿ ತಾವು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಅಪಘಾತವಾದ ನಂತರ ಸ್ಥಳಕ್ಕೆ ಹೋಗಿದ್ದೇವು ಎಂದು ಸಾಕ್ಷ್ಯ ನುಡಿದಿದ್ದು, ಇವರು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಬಗ್ಗೆ ಸಂಶಯವುಂಟಾಗುತ್ತದೆ.

16. ಅ.ಸಾ.8 ಮತ್ತು 9 ರವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷೀದಾರರಾಗಿದ್ದು, ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಮೃತ ವಿಠಲ ರವರ ಪರಿಚಯ ಇದೆ. 2024 ರಲ್ಲಿ ಒಂದು ದಿನ ಯಂಕಂಚಿಯಲ್ಲಿ ಅಪಘಾತವಾಗಿ ಅವರು ಮರಣ ಹೊಂದಿದ್ದಾರೆ. ಆ ಸುದ್ದಿಯನ್ನು ತಾವು ಕೇಳಿರುತ್ತೇವೆ. ಆ ನಂತರ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಸಂಭವಿಸಿತ್ತು ಎಂದು ತಾನು ಕೇಳಿಲ್ಲ. ಆರೋಪಿ ತಮ್ಮ ಊರಿನವರು. ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರು ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ.

17. ಅ.ಸಾ.10 ರಿಂದ 12 ರವರು ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ವಿಚಾರಣೆಯ ವೇಳೆಯಲ್ಲಿ ಈ ಪ್ರಕರಣದಲ್ಲಿ ಮಾಡಿದ ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿಯ ಪರ ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಕೂಡ ಇವರ ಮುಖ್ಯ ವಿಚಾರಣೆಯಲ್ಲಿ ಮೂಡಿಬಂದಿರುವ ಸಾಕ್ಷ್ಯಕ್ಕೆ ವ್ಯತಿರಿಕ್ತವಾದ ಸಾಕ್ಷ್ಯವು ಮೂಡಿಬಂದಿರುವುದಿಲ್ಲ.

18. ಪಿರ್ಯಾದುದಾರರಾದ ಅ.ಸಾ.1 ರವರು ಮೃತರ ಮಗನಾಗಿರುತ್ತಾರೆ. ಇವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡು , ದೂರನ್ನು ನೀಡಿದವರಾಗಿರುತ್ತಾರೆ.

ಅ.ಸಾ.4 ಮತ್ತು 5 ರವರು ಅನುಕ್ರಮವಾಗಿ ಮೃತರ ಮಗ ಮತ್ತು ಹೆಂಡತಿಯಾಗಿರುತ್ತಾರೆ. ಅ.ಸಾ.4, 5,8 ಮತ್ತು 9 ರವರು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷೀದಾರರಾಗಿರುತ್ತಾರೆ. ಇವರು ತಮ್ಮ ವಿಚಾರಣೆಯಲ್ಲಿ ಕುರಿ ಅಡ್ಡ ಬಂದಿದ್ದರಿಂದ ಟಂಟಂ ಪಲ್ಟಿಯಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರತ್ಯಕ್ಷ ಸಾಕ್ಷೀದಾರರೆಂದು ಹೇಳಲಾಗುವ ಅ.ಸಾ.6 ಮತ್ತು 7 ರವರು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ ಎಂದು ನಂಬುವಲ್ಲಿ ಸಂಶಯವುಂಟಾಗುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.10 ರಿಂದ 12 ಪ್ರಕರಣದ ತನಿಖಾಧಿಕಾರಿಗಳಾಗಿರುತ್ತಾರೆ.

19. ಅ.ಸಾ.4,5,8 ಮತ್ತು 9 ರವರು ಕುರಿ ಅಡ್ಡ ಬಂದಿದ್ದರಿಂದ ಈ ಅಪಘಾತಸಂಭವಿಸಿದೆ ಎಂದು ಹೇಳಿರುತ್ತಾರೆ. ಆರೋಪಿಯನ್ನು ಟಂಟಂ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುವಾಗ ಕುರಿ ಅಡ್ಡ ಬಂದಿದ್ದು, ಅದನ್ನು ತಪ್ಪಿಸಲು ಹೋಗಿ ಈ ಅಪಘಾತವು ಸಂಭವಿಸಿರುತ್ತದೆ ಎಂದು ಸಾಕ್ಷ್ಯ ಲಭ್ಯವಿರುತ್ತದೆ. ಹೀಗೆ ಚಾಲನೆ ಮಾಡಿಕೊಂಡು ಹೋಗುವಾಗ ಕುರಿ ಅಡ್ಡ ಬಂದರೆ ಅದನ್ನು ತಪ್ಪಿಸಲು ಚಾಲಕರು ಬ್ರೇಕನ್ನು ಹಾಕುವುದು, ವಾಹನವನ್ನು ರಸ್ತೆಯ ಯಾವುದಾದರು ದಿಕ್ಕಿಗೆ ತೆಗೆದುಕೊಳ್ಳುವುದು ಸಹಜವಾಗಿ ಮಾಡಬೇಕಾಗುತ್ತದೆ. ಈ ಪ್ರಕರಣದಲ್ಲಿಯೂ ಅಂತಹ ಪ್ರಯತ್ನವನ್ನು ಮಾಡಿದ್ದು , ನಿಯಂತ್ರಣ ತಪ್ಪಿ ಟಂಟಂ ವಾಹನ ಪಲ್ಟಿಯಾಗಿ ಅಪಘಾತವು ಸಂಭವಿಸಿದ್ದು,ಆರೋಪಿಯ ನಿರ್ಲಕ್ಷ್ಯತನದ ಚಾಲನೆಯಿಂದ ಅಪಘಾತವು ಸಂಭವಿಸಿದೆ ಎಂದು ಹೇಳಲು ಸಾಧ್ಯವಿಲ್ಲ. ಆರೋಪಿಯ ಮೇಲೆ

ಆಪಾದಿಸಲಾದಂತೆ ಆರೋಪಿಯ ಅಜಾಗರೂಕತೆ ಮತ್ತು ದುಡುಕಿನ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದು ನಂಬಲು ಅಪಘಾತದಲ್ಲಿ ಭಾಗಿಯಾದ ಟಂಟಂ ನಲ್ಲಿ ಪ್ರಯಾಣಿಸಿದವರು ನ್ಯಾಯಾಲಯದ ಮುಂದೆ ಹಾಜರಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಯಾವುದೇ ಸಾಕ್ಷೀದಾರ ಸಾಕ್ಷ್ಯವನ್ನು ಲಭ್ಯವಿರುವುದಿಲ್ಲ. ನಿ.ಪಿ.5 ಪಂಚನಾಮೆಯು ರುಜುವಾತು ಆಗಿರುವುದಿಲ್ಲ. ಅಂತೆಯೇ ಅಭಿಯೋಜನೆಯವರು ಆರೋಪಿಯ ಮೇಲಿನ ಆಪಾದನೆಯನ್ನು ರುಜುವಾತು ಮಾಡಲು ವಿಫಲರಾಗಿದ್ದಾರೆ ಎಂದು ತೀರ್ಮಾನಿಸಿ ಅಂಶ ನಂ.**1** ರಿಂದ **3** ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

20. <u>ಅಂಶ ನಂ.**4** ಮತ್ತು **5**</u> ಃ ಅಪಘಾತದಲ್ಲಿ ಟಂಟಂ ವಾಹನ ನಂ. ಕೆ.ಎ-28/ಡಿ-7521 ಭಾಗಿಯಾದ ಬಗ್ಗೆ ಹಾಗೂ ಸದರಿ ವಾಹನವನ್ನು ಅಪಘಾತದ ದಿನದಂದು ಆರೋಪಿಯು ಚಾಲನೆ ಮಾಡಿರುವ ಬಗ್ಗೆ ತಕರಾರು ಇರುವುದಿಲ್ಲ. ಆರೋಪಿಯು ವಿಮಾ ಪಾಲಿಸಿ ಮಾಡಿಸದೇ ಇರುವ ತಮ್ಮ ಮಾಲೀಕತ್ವದ ಟಂಟಂ ವಾಹನವನ್ನು ಚಾಲನಾ ಪರವಾನಿಗೆ ಪತ್ರ ಇಲ್ಲದ ಚಾಲನೆ ಮಾಡಿಕೊಂಡು ಹೋಗಿದ್ದರು ಎಂದು ಆಪಾದಿಸಲಾಗಿದೆ. ಈ ಬಗ್ಗೆ ಆರೋಪಿಯು ಸದರಿ ಟಂಟಂ ಗೆ ವಿಮಾ ಪತ್ರ ಇದ್ದ ಬಗ್ಗೆ ಹಾಗೂ ಚಾಲನಾ ಪರವಾನಿಗೆ ಇದ್ದ ಬಗ್ಗೆ ಕಾಗದ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ. ಹೀಗಿರುವಾಗ ಆರೋಪಿಯು ಮೋಟಾರು ವಾಹನ ಕಾಯ್ದೆ ಕಲಂ 3 ಸ.ಕ. 181, 146 ಸ.ಕ.196 ರನ್ವಯ

ಅಪರಾಧವನ್ನು ಮಾಡಿದ್ದಾರೆ ಎಂದು ಅಭಿಯೋಜನೆಯವರು ರುಜುವಾತು ಪಡಿಸಿರುತ್ತಾರೆ. ಅಂತೆಯೇ ಅಂಶ ನಂ. **4** ಮತ್ತು **5** ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

21. <u>ಅಂಶ ನಂ.**6** ಃ</u> ಈ ಮೇಲಿನ ಅಂಶ 1 ರಿಂದ 5 ಕ್ಕೆ ನೀಡಿರುವ ಕಾರಣ ಮತ್ತು ಉತ್ತರಕ್ಕನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದ್ದೇನೆ.

<u>ಆದೇಶ</u>

ದಂ.ಪ್ರ.ಸಂ. ಕಲಂ 255(1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ 279, 337,304(ಎ) ರನ್ವಯ ಶಿಕ್ಷಾರ್ಹವಾದ ಅಪರಾಧದ ಆಪಾದನೆಯಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪಿಯನ್ನು ಮೋಟಾರ ವಾಹನ ಕಾಯ್ದೆ ಕಲಂ 3 ಸಹ ವಾಚಕ ಕಲಂ 181 ಮತ್ತು 146 ಸಹವಾಚಕ ಕಲಂ 196 ರನ್ವಯ ದೋಷಿ ಎಂದು ತೀರ್ಮಾನಿಸಲಾಗಿದೆ.

ಆರೋಪಿಯು ಮೋಟಾರ ವಾಹನ ಕಾಯ್ದೆ ಕಲಂ 3 ಸಹ ವಾಚಕ ಕಲಂ 181 ರನ್ವಯ ಶಿಕ್ಷಾರ್ಹವಾದ ಅಪರಾಧಕ್ಕೆ ರೂ.2500/- ನ್ನು ಪಾವತಿಸುವಂತೆ, ತಪ್ಪಿದಲ್ಲಿ 15 ದಿನಗಳ ಸಾದಾ ಕಾರವಾಸವನ್ನು ಅನುಭವಿಸುವಂತೆ ಆದೇಶಿಸಲಾಗಿದೆ.

ಆರೋಪಿಯು ಮೋಟಾರು ವಾಹನ ಕಾಯ್ದೆ ಕಲಂ 146 ಸ.ಕ.196 ರನ್ವಯ ಶಿಕ್ಷಾರ್ಹವಾದ ಅಪರಾಧಕ್ಕೆ ರೂ.1000/- ನ್ನು ಪಾವತಿಸುವಂತೆ, ತಪ್ಪಿದಲ್ಲಿ 15 ದಿನಗಳ ಸಾದಾ ಕಾರವಾಸವನ್ನು ಅನುಭವಿಸುವಂತೆ ಆದೇಶಿಸಲಾಗಿದೆ.

ಆರೋಪಿಯ ಕಡೆಯಿಂದ ಒಟ್ಟು ರೂ.3500/- ದಂಡವನ್ನು ವಸೂಲಿ ಮಾಡಿಕೊಳ್ಳಲು ಕಚೇರಿಯವರಿಗೆ ಆದೇಶಿಸಲಾಗಿದೆ.

ಆರೋಪಿಯು ನ್ಯಾಯಾಲಯಕ್ಕೆ ಬರೆದುಕೊಟ್ಟ ವೈಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿಯುವವರೆಗೆ ಮುಂದುವರಿಸಲಾಗಿದೆ.

( ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನುಕೊಟ್ಟು, ಬೆರಳಚ್ಚು ಮಾಡಿದ ನಂತರ ಪರಿಷ್ಕರಿಸಿ, ತಿದ್ದುಪಡಿ ಮಾಡಿ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 4 ನೇ ಜುಲೈ-2026 ರಂದು ಉಚ್ಚರಿಸಲಾಯಿತು )

(ನಾಗೇಶ ಕೆ. ಮೊಗೇರ)
ಪ್ರಧಾನ ಹಿರಿಯಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿಂದಗಿ.

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿಗಳು.**

| | | |
|---|---|---|
| ಅ.ಸಾ.1 | ಃ | ನಾಗೇಶ ಡೋರನಳ್ಳಿ |
| ಅ.ಸಾ.2 | ಃ | ರವೀಂದ್ರ ಗಡಗಿಮನಿ |
| ಅ.ಸಾ.3 | ಃ | ಮಲ್ಲಿಕಾರ್ಜುನ ಬಿರಾದಾರ |
| ಅ.ಸಾ.4 | ಃ | ಸೋಮಶೇಖರ ಡೋರನಹಳ್ಳಿ |
| ಅ.ಸಾ.5 | ಃ | ಶಾಂತಾಬಾಯಿ ಡೋರನಹಳ್ಳಿ |
| ಅ.ಸಾ.6 | ಃ | ಮೌನೇಶ ಗಡಗಿಮನಿ |
| ಅ.ಸಾ.7 | ಃ | ಶಾಂತಗೌಡ ಬಿರಾದಾರ |
| ಅ.ಸಾ.8 | ಃ | ಸತೀಶ ಬಿರಾದಾರ |
| ಅ.ಸಾ.9 | ಃ | ಹಣಮಂತ್ರಾಯ ಗಡಗಿಮನಿ |
| ಅ.ಸಾ.10 | ಃ | ನಾನಾಗೌಡ ಪೋಲಿಸಪಾಟೀಲ |
| ಅ.ಸಾ.11 | ಃ | ಮಲ್ಲಪ್ಪ ಗೌಂಡಿ |
| ಅ.ಸಾ.12 | ಃ | ಡಿ.ಹುಲಗಪ್ಪ |

**ಅಭಿಯೋಜನೆ ಪರ ಗುರುತಿಸಿಕೊಂಡಿರುವ ದಾಖಲೆಗಳು**

| | | |
|---|---|---|
| ನಿ.ಪಿ.1 | ಃ | ದೂರು |
| ನಿ.ಪಿ.1 ಎ | ಃ | ಸಹಿ |
| ನಿ,ಪಿ.2 | ಃ | ಇಂಕ್ವೆಸ್ಟ ಪಂಚನಾಮೆ |
| ನಿ.ಪಿ.2 ಎ | ಃ | ಸಹಿ |
| ನಿ.ಪಿ.3, 4 | ಃ | ಪೋಟೊಗಳು |
| ನಿ.ಪಿ.5 | ಃ | ಗುನ್ನೆ ಜಾಗೆಯ ಪಂಚನಾಮೆ |

ನಿ.ಪಿ.5 ಎ, ಃ ಸಹಿ
ನಿ.ಪಿ.6,7 ಃ ಪೋಟೊಗಳು
ನಿ.ಪಿ.8 ಃ ಸೀಜರ ಪಂಚನಾಮೆ
ನಿ.ಪಿ.8 ಎ,ಬಿ,ಸಿ ಃ ಸಹಿಗಳು
ನಿ.ಪಿ.9,10 ಃ ಪೋಟೊಗಳು
ನಿ.ಪಿ.11 ಃ ಅ.ಸಾ.4 ರವರ ಹೇಳಿಕೆ
ನಿ.ಪಿ.12 ಃ ಅ.ಸಾ.5 ರವರ ಹೇಳಿಕೆ
ನಿ.ಪಿ.13 ಃ ಅ.ಸಾ.8 ರವರ ಹೇಳಿಕೆ
ನಿ.ಪಿ.14 ಃ ಅ.ಸಾ.9 ರವರ ಹೇಳಿಕೆ
ನಿ.ಪಿ.15 ಃ ಪಿ.ಎಮ್.ವರದಿ
ನಿ.ಪಿ.15 ಎ ಃ ಸಹಿ
ನಿ.ಪಿ.16 ಃ ಎಮ್.ವಿ ವರದಿ
ನಿ.ಪಿ.16 ಎ ಃ ಸಹಿ
ನಿ.ಪಿ.17,18 ಃ ಗಾಯದ ಪ್ರಮಾಣ ಪತ್ರಗಳು
ನಿ.ಪಿ.17 ಎ,18 ಎ ಃ ಸಹಿಗಳು
ನಿ.ಪಿ.19 ಃ ಪ್ರಥಮ ವರ್ತಮಾನ ವರದಿ
ನಿ.ಪಿ.19 ಎ ಃ ಸಹಿ
ನಿ.ಪಿ.20 ಃ ಗುನ್ನೆ ಜಾಗೆಯ ನಕ್ಷೆ
ನಿ.ಪಿ.20 ಎ ಃ ಸಹಿ

ಅಭಿಯೋಜನೆ ಪರ ಗುರುತಿಸಿಕೊಂಡಿರುವ ಮುದ್ದೆಮಾಲುಗಳು

-ಇಲ್ಲ-

ಆರೋಪಿಯ ಪರ ವಿಚಾರನೆಯಾದ ಸಾಕ್ಷಿಗಳು ಮತ್ತು ಗುರುತಿಸಿಕೊಂಡಿರುವ ದಾಖಲೆಗಳು.

-ಇಲ್ಲ-

NAGESH KORGA MOGER
judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.07.06 17:18:21 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿಂದಗಿ.